## ‘ಮರಗಳ ಹಬ್ಬ’ದಲ್ಲಿ ಟಿ.ವಿ. ರಾಮಚಂದ್ರ ಕಿಡಿ

# ಶೇ 96 ಬೆಂಗಳೂರಿಗರು ಶತಮೂರ್ಖರು

**ಪ್ರಜಾವಾಣಿ ವಾರ್ತೆ**



‘ನೆರಳು’ ಸಂಘಟನೆಯ ಆಶ್ರಯದಲ್ಲಿ ನಗರದಲ್ಲಿ ಶನಿವಾರ ನಡೆದ ‘ಬೆಂಗಳೂರು ಮರಗಳ ಹಬ್ಬ’ದಲ್ಲಿ ಪಾಲ್ಗೊಂಡ ಯುವಜನರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಗರದಲ್ಲಿ ವ್ಯಾಪಕ ಪ್ರಮಾಣದಲ್ಲಿ ಪರಿಸರ ಮಾಲಿನ್ಯ ಆಗುತ್ತಿದೆ. ಶೇ 4 ಮಂದಿಗೆ ಮಾತ್ರ ಪರಿಸರ ಶಿಕ್ಷಣ ಇದೆ. ಶೇ 96 ಬೆಂಗಳೂರಿನ ನಿವಾಸಿಗಳು ಶತಮೂರ್ಖರು’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ ಕಿಡಿಕಾರಿದರು.

‘ನೆರಳು’ ಸಂಘಟನೆಯ ಆಶ್ರಯದಲ್ಲಿ ನಗರದಲ್ಲಿ ಶನಿವಾರ ನಡೆದ ‘ಬೆಂಗಳೂರು ಮರಗಳ ಹಬ್ಬ’ದಲ್ಲಿ ಅವರು ಉಪನ್ಯಾಸ ನೀಡಿದರು.

ನಗರದಲ್ಲಿ ಹಸಿರಿನ ಪ್ರಮಾಣ ವೇಗವಾಗಿ ಕಡಿಮೆ ಆಗುತ್ತಿದೆ. ಗಿಡಗಳನ್ನು ಬೆಳೆಸುವ ಕಾರ್ಯ ಸರಿಯಾಗಿ ಆಗುತ್ತಿಲ್ಲ. ಮನೆ ಎದುರು ಕಸ ಬೀಳುತ್ತದೆ ಎಂಬ ಒಂದೇ ಕಾರಣಕ್ಕೆ ಮರಗಳನ್ನು ಕಡಿಯಿರಿ ಎಂದು ದುಂಬಾಲು ಬೀಳುವ ನಿವಾಸಿಗಳೂ ಇದ್ದಾರೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

1949ರಲ್ಲಿ ನಗರದ ವ್ಯಾಪ್ತಿ 69 ಚದರ ಕಿ.ಮೀ. ಇತ್ತು. 2007ರಲ್ಲಿ ಬೆಂಗಳೂರು 716 ಚದರ ಕಿ.ಮೀ.ಗೆ ಹಿಗ್ಗಿತು. ಆರನೇ ವೇತನದ ಆಯೋಗದ ಲಾಭ ಪಡೆಯುವ ಉದ್ದೇಶಕ್ಕಾಗಿಯೇ ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ’ಯನ್ನಾಗಿ ಮಾಡಲಾಯಿತು. ಇದರ ಹಿಂದೆ ನಗರದ ಉದ್ಧಾರದ ಉದ್ದೇಶ ಇರಲಿಲ್ಲ ಎಂದರು.

ನಗರದ ಜನಸಂಖ್ಯೆ 95 ಲಕ್ಷ ದಾಟಿದೆ. ಇಲ್ಲಿರುವ ಮರಗಳ ಸಂಖ್ಯೆ 14,78,412. ಏಳು ವ್ಯಕ್ತಿಗೆ ಒಂದು ಮರ ಇದೆ. ಗುಜರಾತ್‌ನ ಗಾಂಧಿನಗರದಲ್ಲಿ ಪ್ರತಿವ್ಯಕ್ತಿಗೆ ನಾಲ್ಕು ಮರ, ನಾಸಿಕ್‌ನಲ್ಲಿ ಪ್ರತಿ ವ್ಯಕ್ತಿಗೆ ಎರಡು ಮರಗಳು ಇವೆ. ಅಭಿವೃದ್ಧಿ ಚಟುವಟಿಕೆಗಳಿಗಾಗಿ ಮರಗಳ ಹನನ ಮಾಡಲಾಗುತ್ತಿದೆ. ಅಂತರ್ಜಲ ಮರುಪೂರಣ ಸರಿಯಾಗಿ ಆಗಬೇಕಾದರೆ ವಾರ್ಡ್‌ನಲ್ಲಿ ಕನಿಷ್ಠ ಶೇ 35ರಷ್ಟು ಹಸಿರು ಇರಬೇಕು ಎಂದು ಅವರು ಪ್ರತಿಪಾದಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆ 400 ಎಕರೆ ವಿಸ್ತೀರ್ಣದಲ್ಲಿದೆ. ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 5 ಸಾವಿರ. ಇಲ್ಲಿ 22 ಸಾವಿರ ಮರಗಳು ಇವೆ. ಬೆಂಗಳೂರಿನ ಉಷ್ಣಾಂಶಕ್ಕಿಂತ ಕ್ಯಾಂಪಸ್‌ನ ಉಷ್ಣಾಂಶ ಶೇ 2 ಕಡಿಮೆ ಇದೆ. ಹಲಸೂರು ಕೆರೆ, ಬೆಳ್ಳಂದೂರು ಕೆರೆ, ಲಾಲ್‌ಬಾಗ್ ಉದ್ಯಾನ ಪ್ರದೇಶದಲ್ಲೂ ಉಷ್ಣಾಂಶ ಶೇ 2 ರಷ್ಟು ಕಡಿಮೆ ಇದೆ ಎಂದರು.

ಬೆಂಗಳೂರು ದೇಶದ ಐದನೇ ಮಾಲಿನ್ಯ ನಗರಿ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ವಾಯುಮಾಲಿನ್ಯ ಮಿತಿಮೀರಿ ಆಗುತ್ತಿದೆ. ವಾರಾಂತ್ಯದಲ್ಲಿ ಶಾಪಿಂಗ್ ಮತ್ತಿತರ ಕಾರಣಗಳಿಂದ ನಗರ ಸುತ್ತಾಟಕ್ಕೆ ತೆರಳುವ ಶೇ 99 ಜನ ಆಕ್ರಮಣಶೀಲರಾಗಿ ಬಿಡುತ್ತಾರೆ. ಅವರು ಮನೆಯಲ್ಲೇ ಇದ್ದರೆ ನೆಮ್ಮದಿಯಿಂದ ಇರುತ್ತಾರೆ. ಇದು ವಾಯುಮಾಲಿನ್ಯದ ಕಾರಣ ಎಂದು ಅವರು ಬೆಟ್ಟು ಮಾಡಿ ಹೇಳಿದರು.

ಪರ್ಯಾಯ ಕಾನೂನು ವೇದಿಕೆಯ ಸದಸ್ಯ ವಿನಯ್ ಶ್ರೀನಿವಾಸ್ ಮಾತನಾಡಿ, ಸಾರಿಗೆ ಯೋಜನೆಗಳಿಗಾಗಿ ಕಳೆದ ಎಂಟು ವರ್ಷಗಳಲ್ಲಿ 10 ಸಾವಿರ ಮರಗಳನ್ನು ಕಡಿಯಲಾಗಿದೆ. ಅಭಿವೃದ್ಧಿ ಕಾಮಗಾರಿಗಳಿಗಾಗಿ ಪರಿಸರ ಹಾಳು ಮಾಡುವ ಕೆಲಸ ಆಗುತ್ತಿದೆ ಎಂದು ಕಿಡಿಕಾರಿದರು.